ಜಾಕೋಬ್ ಡಿಸೋಜ, ಕುರುವಳ್ಳಿ
*ಸಾಧನೆಯ ಹಾದಿಯಲ್ಲಿ ವೇದನೆಗಳು ಬರುವುದೇಕೆ?*



ಪ್ರಕೃತಿ ನಿಯಮ; ವೇದನೆಯ ಚಿಪ್ಪು ಒಡೆದರೆ ಸಾಧನೆಯ ಮರಿ ಹೊರಗೆ!

ಕೆ.ಎಂ. ವಿಭೂತಿ, ಹರಿಹರ
*ಜೀವನ ಎಂದರೆ ಇರುವೆ ಬಿಟ್ಟುಕೊಳ್ಳುವುದೆ?*
ಊಹೂಂ. ಇರುವೆ ಎಂದು ಸ್ಥಾಪಿಸಿಕೊಳ್ಳುವುದು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಬುದ್ಧಿ ಹೆಚ್ಚೋ, ಹೃದಯ ಹೆಚ್ಚೋ?*
ಹೃದಯವೇ ಎನ್ನಲು heartನಲ್ಲೇ ಹೆಚ್ಚಿದೆಯಲ್ಲ.

ಅಮರಯ್ಯಾ ಪತ್ರಿಮಠ, ಸುರಪೂರ
*ಮಾನವನಿಗೆ ಒಂದೇ ಕಿವಿಯಿದ್ದಿದ್ದರೆ ಏನಾಗುತ್ತಿತ್ತು?*
ಕನ್ನಡಕಕ್ಕೆ ಬ್ಯಾಲೆನ್ಸ್ ಸಿಗದೆ ಬಿದ್ದುಹೋಗುತ್ತಿತ್ತು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ಕವಿ ಮುಖ್ಯವೊ, ಕವಿ ಬರೆದ ಕಾವ್ಯ ಮುಖ್ಯವೊ ಸರ್?*



ಕಾವ್ಯವೇ; ಕವಿ ನಶ್ವರ; ಕಾವ್ಯ ಅಮರ.

ದಿನೇಶ್, ಗುಡ್ಡದೂರು
*ನಾಯಿಕೊಡೆಗೂ, ಮಾನವ ಬಳಸುವ ಕೊಡೆಗೂ ಇರುವ ವ್ಯತ್ಯಾಸವೇನು?*
ವೃಷ್ಟಿಗೊಂದು; ಪುಷ್ಟಿಗೊಂದು.

ಎಂ.ಎಂ. ಗೋರಬಾಳ, ಮಾಣಿಕವಾಡಿ
*ಭವಿಷ್ಯ ಹೇಳುವ ಸ್ವಾಮಿಗಳು ವಿವಿಧ ವಸ್ತುಗಳ ಬಗ್ಗೆ ಹೆಚ್ಚಾಗಿ ಜಾಹೀರಾತು ಪ್ರಸಾರ ಮಾಡಲು ಕಾರಣ?*
ಹಾಗೆ ಮಾಡುವುದರಿಂದ ಅವರ ಭವಿಷ್ಯ ಉಜ್ವಲವಾಗುತ್ತದಂತೆ.

ಎಸ್.ಎನ್.ಮಹಾಬಲರಾವ್, ಎನ್ನಾರ್ ಪುರ
*ಹೊಟ್ಟೆ ಕಮ್ಮಿ ಆದರೆ ಕೇಳ್ತಾರೆ; ಬಟ್ಟೆ ಕಮ್ಮಿ ಆದರೆ ಕೇಳಲ್ಲ?*
ಕೇಳ್ತಾರೆ– ಆ ಯುವತಿಯ ಫೋನ್ ನಂಬರ್, ಅಡ್ರೆಸ್, ಲೈಕ್ಸ್, ಫ್ರೀ ಟೈಮ್, ಎಲ್ಲಾ ಕೇಳ್ತಾರೆ.

ಮಹಾವೀರ ಕಾಸರ, ಶಿವಮೊಗ್ಗ
*ಕನ್ನಡಕ್ಕಾಗಿ ಕೈ ಎತ್ತುವವರ ಕಾಲು ಎಲ್ಲಿರುತ್ತದೆ?*
ಕೆಲವೊಮ್ಮೆ, ಹಫ್ತಾ ವಸೂಲಿಯ ಕೆಸರಿನಲ್ಲಿ.

8ಬೂಕನಕೆರೆ ವಿಜೇಂದ್ರ, ಮೈಸೂರು
*ಬಡವನಿಗಿರುವ ನಿಯತ್ತು ಶ್ರೀಮಂತರಿಗೇಕೆ ಇರುವುದಿಲ್ಲ?*
ಆ ನಿಯತ್ತನ್ನು ಮಾರಿಕೊಂಡದ್ದಕ್ಕೇ ಅವರು ಶ್ರೀಮಂತರಾದುದಂತೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಕನ್ನಡಿಗರಲ್ಲಿರುವ ಕಲೆಗಳನ್ನು ಸಮರ್ಥವಾಗಿ ಗುರುತಿಸುವವರು ಯಾರು?*
ಕನ್ನಡಿಗರ ಎಲ್ಐಸಿ ಏಜೆಂಟುಗಳು; ವಿಮೆ ಮಾಡಿಸಲು ಮೈಮೇಲಿನ ಒಂದಾದರೂ ಕಲೆಯನ್ನು ಗುರುತಿಸುವುದು ಅಗತ್ಯ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
*ಉಸಿರು ಮುಖ್ಯವೋ, ಹೆಸರು ಮುಖ್ಯವೋ?*
ಹೆಸರೇ; ಸತ್ತನಂತರವೂ ಡೆತ್ ಸರ್ಟಿಫಿಕೇಟಿಗೆ ಹೆಸರು ಬೇಕಾಗುತ್ತದೆ!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ರಾಗಿಯಿಂದಲೂ ದೇವರಿಗೆ ನೈವೇದ್ಯ ಮಾಡುವಂತಿದ್ದರೆ ಚೆನ್ನಿತ್ತಲ್ಲವೆ?*
ಈಗಲೂ ಎರಡು ವಿಧದ ರಾಗಿಯಿಂದ ನೈವೇದ್ಯಗಳು ನಡೆಯುತ್ತವೆ; ವಿ–ರಾಗಿ; ಭೈ–ರಾಗಿ.

ಸುಜ್ಞಾನಾಚಾರ್ಯ ಕೆ.ಪಿ. ಕಲಿಕೆರೆ
*ಮದುವೆ ಮಾಡಿಸುವ ಪುರೋಹಿತರಿಗೆ ಮಕ್ಕಳು ಆಗಲ್ಲವಂತೆ. ಏಕೆ?*
ಜೀವಶಾಸ್ತ್ರದ ನಿಯಮವೇ ಕಾರಣ – ಗಂಡಸರಿಗೆ ಮಕ್ಕಳು ಆಗುವುದಿಲ್ಲ.

## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು
*ನಮ್ಮಿಬ್ಬರದೂ ಒಂದೇ ರಾಶಿ. ಮದುವೆ ಆಗಬಹುದೆ?*
ಛೆ! ಅವಳು ಕನ್ಯಾ, ನೀವು ಕುಂಭ ಆದರೆ ಸೊಂಟದಲ್ಲಿ ಹೊತ್ತು ತಿರುಗಲು ಅನುಕೂಲವಾಗುತ್ತಿತ್ತು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಆಸೆ ಮತ್ತು ದುರಾಸೆಗಳಲ್ಲಿನ ವ್ಯತ್ಯಾಸವೇನು?*
ಆಸೆ ಜೀವಜಲ; ದುರಾಸೆ ಸುನಾಮಿ.

ವೀಣಾ ರವಿ ಪೈ, ಕಾಸರಕೋಡ
*ಕಾಯಕವೇ ಕೈಲಾಸ. ಯಾವಾಗ?*
ಕಾಯಿಸದೆ ಸಂಬಳ, ಬೋನಸ್ ಕೊಟ್ಟಾಗ.

ಎಸ್.ವಿ. ಶ್ರೀನಿವಾಸ್, ಮೈಸೂರು
*ಬೇಳೆ ಬೇಯಿಸಿಕೊಳ್ಳಲು ಯಾವುದು ಸೂಕ್ತ - ತೊಗರಿಬೇಳೆ; ಉದ್ದಿನ ಬೇಳೆ; ಕಡಲೆ ಬೇಳೆ?*
ಎಲೆಕ್ಷನ್ನಲ್ಲಿ ತೊಗೋರೀ ಬೇಳೆ; ಸರ್ಕಾರದಲ್ಲಿ ಕಡ(ಸಾಲಭಾಗ್ಯ)ಲೇ ಬೇಳೆ; ಆತ್ಮೀಯರಲ್ಲಾದರೆ ಮುದ್ದಿನ ಬೇಳೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಪ್ರೀತಿಯೆಂಬ ಎಣ್ಣೆ ಹಾಕಿ, ಮದುವೆಯೆಂಬ ಬತ್ತಿ ಸೇರಿಸಿದರೂ ಜೀವನದಲ್ಲಿ ಕತ್ತಲೇಕೆ?*



ಹೊಂದಾಣಿಕೆಯೆಂಬ ಕಡ್ಡಿ ಗೀರಿ ತೃಪ್ತಿಯ ಬೆಳಕು ಹೊತ್ತಿಸಿಲ್ಲವಲ್ಲ.

ಎ. ಕೃಷ್ಣಾನಂದ ಶೆಟ್ಟಿ, ದಕ್ಷಿಣ ಕನ್ನಡ
*ನಗುವಿನಲ್ಲಿ ದುಃಖ ಇರುತ್ತದೆ; ಹಳ್ಳದಲ್ಲಿ ಆಳ ಇರುತ್ತದೆ. ದಾರಿದ್ರ್ಯದಲ್ಲಿ?*
ದಾರಿ ಇರುತ್ತದೆ.

ಪೂರ್ಣಿಮಾ ಹೆಜಮಾಡಿ, ಸಾಂಗ್ಲಿ
*ಮಮ್ಮಿಗಳು ಈಜಿಪ್ಟಿನಲ್ಲಿದ್ದಾರೆ; ಡ್ಯಾಡಿಗಳು ಎಲ್ಲಿದ್ದಾರೆ ರಾಮ್?*
ಅವರವರ ಮಕ್ಕಳ ಮಮ್ಮಿಗಳಿಗೆ ಅನುಕೂಲವಾಗುವಂತಹ ಶಿಫ್ಟಿನಲ್ಲಿದ್ದಾರೆ.

■ ರಾಮ್